ದಯವಿಟ್ಟು ಒಂದು ಮಾತನ್ನು ತಿಳಿದುಕೊಳ್ಳಬೇಕು. ಕಾವೇರಿ ಬೇಸಿನ್ ಡೆಫಿಸಿಟ್ ಬೇಸಿನ್, ಅಲ್ಲಿ ನೀರಿನ ಕೊರತೆ ಇದೆ. ಇವತ್ತು ಹೇಮಾವತಿ ನೀರಿನ ಕೊರತೆ ಇದೆ. ಕೆ.ಆರ್.ಎಸ್. ಮತ್ತು ಹಾರಂಗಿಯಲ್ಲಿ ನೀರಿನ ಕೊರತೆ ಇದೆ. ಯಗಚಿ ಹಾಗೂ ಕಬಿನಿಯಲ್ಲಿ ನೀರಿನ ಕೊರತೆ ಇದೆ. ಅರ್ಕಾವತಿ ಮತ್ತು ಇಗ್ಗಲೂರಿನಲ್ಲಿ ನೀರಿನ ಕೊರತೆ ಇದೆ. ಎಲ್ಲಾ ಪ್ರದೇಶಗಳಲ್ಲಿ ನೀರಿನ ಕೊರತೆ ಇರುವಂತಹ ಕಾವೇರಿ ಬೇಸಿನ್‌ಗೆ ನೇತ್ರಾವತಿ ಬೇಸಿನ್‌ನ್ನು ಜಾಯಿನ್ ಮಾಡಿದರೆ ಎಷ್ಟು ಪ್ರಯೋಜನವಾಗುತ್ತದೆ ಎಂಬ ಬಗ್ಗೆ ಫೀಸಿಬಿಲಿಟಿ ಸ್ಟಡಿ ಮಾಡುವುದಕ್ಕೆ ಮಾತ್ರ. ಆ ತಾಂತ್ರಿಕದಲ್ಲಿ ಅದು ಯೋಗ್ಯವಿದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಒಂದು ಫೀಸಿಬಿಲಿಟಿ ಸ್ಟಡಿ ಮಾಡಿ ಡೀಟೈಲ್ ಆಗಿ ಇನ್‌ವೆಸ್ಟಿಗೇಟ್ ಮಾಡಿ ಒಂದು ರಿಪೋರ್ಟ್‌ನ್ನು ಸರ್ಕಾರಕ್ಕೆ ಕೊಡಬೇಕು. ಇದರ ಬಗ್ಗೆ ಸರ್ಕಾರ ಮುಂದಿನ ಕ್ರಮ ಏನು ತೆಗೆದುಕೊಳ್ಳಬೇಕು. ಕಾವೇರಿ ಪ್ರಾಧಿಕಾರದಲ್ಲಿ ಮಾತನಾಡಬೇಕೇ ಅಥವಾ ಇಲ್ಲಾ ಇದರ ಬಗ್ಗೆ ಯಾರ ಜೊತೆಯಲ್ಲಿ ಮಾತನಾಡಬೇಕು. ಇದರ ಬಗ್ಗೆ ಯಾರು ತೆಗೆದುಕೊಳ್ಳಬೇಕೆಂಬ ಬಗ್ಗೆ ಬಹಳ ವರ್ಷಗಳ ಹಿಂದೆ ಇದನ್ನು ಮಾಡಿದ್ದಾರೆ. ಈಗ ಲೇಟೆಸ್ಟ್ ಆಗಿ ಮಳೆಗಳಲ್ಲಿ ಬಹಳ ವ್ಯತ್ಯಾಸವಿರುವುದರಿಂದ..... ಮಾನ್ಯ ಶಿವನಂಜಪ್ಪನವರೇ, ದಯವಿಟ್ಟು ನನ್ನ ಮಾತನ್ನು ಮೊದಲು ಕೇಳಿ.

(ಗೊಂದಲ)

ಶ್ರೀ ಜಿ. ಎಸ್. ಶಿವನಂಜಪ್ಪ : ಮಾನ್ಯ ಮಾಧುಸ್ವಾಮಿಯವರು ನಿನ್ನೆ ದಿವಸ ಮಾತನಾಡಿರುವ ವಿಚಾರ ಮಿಸ್‌ಲೀಡಿಂಗ್ ಆಗಿದೆ. ಅದನ್ನು ರೆಕ್ಟಿಫೈ ಮಾಡಿ ಎಂದು ಹೇಳಿದ್ದಾರೆ. ಅವರು ಹೊಸದಾಗಿ ಕೇಳುತ್ತಿದ್ದಾರೆ ಎಂದು ತಾವು ಹೇಳುತ್ತಿರಲ್ಲಾ. ತಾವು ಇಂಡಿಪೆಂಡೆಂಟ್ ಆಗಿ ಹೇಳುತ್ತಿರುವುದು.

ಮಾನ್ಯ ಸದಸ್ಯರು : ನೇತ್ರಾವತಿ ನೀರು ಇಂಡಿಪೆಂಡೆಂಟ್ ಆಗಿ ಕೋಲಾರ ಜಿಲ್ಲೆಗೆ ಬರುವುದರಲ್ಲಿದೆ. ಅದನ್ನು ಅವರು ಜಾರಿಗೆ ತನ್ನಿ ಎಂದು ಹೊಸದಾಗಿ ಕೇಳುತ್ತಿದ್ದಾರೆ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಮಾಧುಸ್ವಾಮಿಯವರು ಪತ್ರಿಕೆಯಲ್ಲಿ ಬಂದಿರುವ ವಿಚಾರದ ಬಗ್ಗೆ ಕ್ಲಾರಿಫೈ ಮಾಡಿದ್ದಾರೆ. ಅದು ಸರಿ ಹೋಗುತ್ತದೆ. ನಾನು ಹೊಸ ವಿಚಾರದ ಬಗ್ಗೆ ಆಲೋಚನೆ ಮಾಡುವಂತಹ ಸಂದರ್ಭದಲ್ಲಿ ಎಲ್ಲೆಲ್ಲಿ ನೀರಿನ ಕೊರತೆ ಇದೆ, ಯಾವ ಯಾವ ಭಾಗದಲ್ಲಿ ನೀರಿನ ಕೊರತೆ ಇದೆ. ಎಲ್ಲಿ ನಾವು ಹಣವನ್ನು ಹೂಡಿದ್ದೇವೆ, ಅದರಲ್ಲೂ ವಿಶೇಷವಾಗಿ ತುಮಕೂರು ಜಿಲ್ಲೆಯ ರೈತರಿಗೆ ಆ ಭಾಗಕ್ಕೆ ಬೇಸಿನ್‌ನಲ್ಲಿ ಮಾಡಿಕೊಡುವುದಕ್ಕೆ ಒಂದು ಫೀಸಿಬಿಲಿಟಿ ರಿಪೋರ್ಟ್‌ನ್ನು ತರಿಸಿಕೊಡುತ್ತೇವೆಂದು ಹೇಳುವುದಕ್ಕೆ ನಮ್ಮೂರಿಗೆ ಕೊಡಿ, ನಮ್ಮೂರಿಗೆ ಕೊಡಿ ಎಂದು ಹೇಳುವುದಲ್ಲ. ಈ ವಿಷಯದ ಬಗ್ಗೆ ತಾಂತ್ರಿಕ ಸಮಿತಿಯನ್ನು ರಚನೆ ಮಾಡುತ್ತೇವೆ.

ಆ) ನಿಪ್ಪಾಣಿ ಕ್ಷೇತ್ರಕ್ಕೆ ಮಹಾರಾಷ್ಟ್ರದ ವೇದಗಂಗಾ ನದಿಯಿಂದ ನೀರು ಸರಬರಾಜು

ಶ್ರೀ ಸುಭಾಷ ಶ್ರೀಧರ್ ಜೋಷಿ (ನಿಪ್ಪಾಣಿ) : ಮಾನ್ಯ ಉಪಾಧ್ಯಕ್ಷರೆ, ನಮ್ಮ ಕ್ಷೇತ್ರಕ್ಕೆ ಮಹಾರಾಷ್ಟ್ರದ ವೇದಗಂಗಾ ನದಿಯಿಂದ ನೀರು ಬರಬೇಕು. ಇದರ ಬಗ್ಗೆ ನಾನು ಕಳೆದ 5 ವರ್ಷದಿಂದ ಒತ್ತಾಯ ಮಾಡುತ್ತಿದ್ದೇನೆ; ಆದರೂ ಸಹ ಈ ಸರ್ಕಾರ ಏನು ಮಾಡಿಲ್ಲ. ನಮ್ಮ ಕ್ಷೇತ್ರಕ್ಕೆ ಕುಡಿಯುವ ನೀರಿನ ಸಮಸ್ಯೆ ಬಹಳ ತೊಂದರೆಯಾಗಿದೆ ಎಂದು ನಾನು ಈಗಾಗಲೇ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇನೆ. ಮಹಾರಾಷ್ಟ್ರ ಸರ್ಕಾರದ ಜೊತೆ 5 ವರ್ಷದ ಅಗ್ರಿಮೆಂಟ್ ಆಗಬೇಕೆಂದೂ ಹಾಗೂ 26 ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲವೆಂದು ಅವರು ಹೇಳಿದ್ದಾರೆ. ಇದರಿಂದಾಗಿ ನಮ್ಮ

ಕ್ಷೇತ್ರಕ್ಕೆ ಬಹಳ ತೊಂದರೆಯಾಗುತ್ತಿದೆ. ಇದರ ಬಗ್ಗೆ ಸರ್ಕಾರದ ಕಡೆಯಿಂದ ಏನು ಉತ್ತರ ಬರುತ್ತಿದೆ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಯು. ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೆ, ತಾವು ಶೂನ್ಯವೇಳೆ ಎಂದು ಹೇಳುತ್ತೀರಿ. ಇಲ್ಲಿ ಉತ್ತರ ಹೇಳುವವರು ಯಾರೂ ಇಲ್ಲ. ಮಾನ್ಯ ಸದಸ್ಯರು ಹೇಳುವ ವಿಚಾರವನ್ನು ಯಾರಾದರೂ ಕೇಳಿದ್ದಾರಾ? ಇದಕ್ಕೆ ಉತ್ತರ ಕೊಡುವವರು ಯಾರು ಇಲ್ಲ.

ಶ್ರೀ ಕೆ. ಎನ್. ನಾಗೇಗೌಡ : (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ಮಾನ್ಯ ಸಭಾಪತಿಯವರೇ ನನಗೆ ನೋಟೀಸ್ ಬಂದಿಲ್ಲ. ಆದರೂ ಸಹ ಸದಸ್ಯರು ಹೇಳಿದ್ದಾರೆಂಬ ಬಗ್ಗೆ ನಾನು ಫೈಲ್‌ನ್ನು ತರಿಸಿದ್ದೇನೆ. ನಮಗೂ ಸಹ ಕೆಲಸ ಮಾಡಬೇಕೆಂದು ಆಸೆ ಇದೆ. ಆದರೆ ನೋಟೀಸ್ ಬರಬೇಕಲ್ಲಾ. ಮಾನ್ಯ ಜೋಷಿಯವರು ಬಹಳ ಪ್ರಾಮುಖ್ಯವಾದ ವಿಷಯವನ್ನು ಎತ್ತಿದ್ದಾರೆ. ದೂದಗಂಗಾ ಇರಿಗೇಷನ್ ಪ್ರಾಜೆಕ್ಟ್‌ಗೆ ಮಹಾರಾಷ್ಟ್ರದವರು ನೀರನ್ನು ಕೊಡಬೇಕೆನ್ನುವ ವಿಚಾರದಲ್ಲಿ 4 ಟಿಎಂಸಿ ನೀರನ್ನು ನಮ್ಮ ಕರ್ನಾಟಕ್ಕೆ ಕೊಡಬೇಕು. ಇದರಲ್ಲಿ ನಾನು ಈಗಾಗಲೇ 41/2 ಕೋಟಿ ರೂಪಾಯಿಗಳನ್ನು ಕಟ್ಟಿದ್ದೇವೆ.

11.40ಎಎಂ

ಆದರೆ, ಅವರು ಹಣ ಕಟ್ಟಿಲ್ಲ ಹಣ ಕಟ್ಟದಿದ್ದರೆ ನಾವು ನೀರು ಬಿಡುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ನಾನೂ ಕೂಡ ಮಹಾರಾಷ್ಟ್ರದ ಇರಿಗೇಷನ್ ಮಿನಿಷ್ಟರ್ ಹತ್ತಿರ ಮಾನ್ಯ ಜೋಶಿಯವರನ್ನು ಕೂರಿಸಿಕೊಂಡು ಮಾತನಾಡಿದಾಗ ಅವರು ಫುಲ್ ಅಮೌಂಟ್ ಕಟ್ಟಬೇಕೆಂದು ಹೇಳಿದರು. ನಮ್ಮದು ಅಗ್ರಿಮೆಂಟ್ ಆಗಿಲ್ಲ. ಅಗ್ರಿಮೆಂಟ್ ಆಗಿಲ್ಲದಿರುವುದರಿಂದ ನಾವು ಪಾರ್ಷಿಯಲ್ ಅಮೌಂಟ್ ಕಟ್ಟುತ್ತೇವೆ ನೀರು ಬಿಡಿಯೆಂದು ಹೇಳಿದ್ದೆವು. ನಮ್ಮ ಮುಖ್ಯಮಂತ್ರಿಗಳೂ ಕೂಡ ಮಹಾರಾಷ್ಟ್ರದ ಮುಖ್ಯಮಂತ್ರಿಗಳಿಗೆ ಕಾಗದ ಬರೆದಿದ್ದಾರೆ. ನಾವು ಹಣ ಕಟ್ಟಿಕೊಡುತ್ತೇವೆ ಬೆಳೆ ನಷ್ಟವಾಗುತ್ತದೆ, ಬೆಳೆ ಬೆಳೆದು ನಿಂತಿದೆ ಅದಕ್ಕೋಸ್ಕರ ನೀರು ಕೊಡಬೇಕೆಂದು ಹೇಳಿ ನಮ್ಮ ಮುಖ್ಯಮಂತ್ರಿಗಳೂ ಕೂಡ ಕಾಗದ ಬರೆದಿದ್ದಾರೆ. ನಮ್ಮ ಹಣಕಾಸಿನ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ 50 ಲಕ್ಷ ರೂ. ಆದರೂ ಬಿಡುಗಡೆ ಮಾಡಿಸಿ ಕೂಡಲೇ ನೀರು ಬಿಡಿಸುವಂತಹ ವ್ಯವಸ್ಥೆಯನ್ನು ಮಾಡಿಸುತ್ತೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಹೋದ ಸಾರಿ ನೀರಾವರಿ ಮಂತ್ರಿಗಳಿಗೆ ನಾವು ಇದೇ ಪ್ರಶ್ನೆ ಕೇಳಿದ್ದೇವೆ. ಅವರು ಇದೇ ಉತ್ತರ ಕೊಟ್ಟಿದ್ದಾರೆ. ಈಗಲೂ ಅದೇ ಉತ್ತರ ಹೇಳುತ್ತಿದ್ದಾರೆ. ನಮಗೆ ಸ್ಪಷ್ಟವಾದ ಉತ್ತರ ಬೇಕು. ಮಹಾರಾಷ್ಟ್ರ ಸರ್ಕಾರದ ಜೊತೆ ಯಾವಾಗ ಮೀಟಿಂಗ್ ಮಾಡುತ್ತೀರಿ?

ಶ್ರೀ ಕೆ. ಎನ್. ನಾಗೇಗೌಡ : ಹೋದ ಸಾರಿ ನೀರು ಬರಲಿಲ್ಲ, ಆ ಭಾಗಕ್ಕೆ ದುಡ್ಡು ಕೊಡಲಿಲ್ಲವೆಂದು ಹೇಳಿದರು. ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು. ಮಹಾರಾಷ್ಟ್ರದಿಂದ ನೀರು ಬಿಡಿಸಿ ಬೆಳೆ ರಕ್ಷಣೆ ಮಾಡಿಸಿದ್ದೇವೆ. ಹೋದಸಾರಿ ಇದೇ ಉತ್ತರ ಹೇಳಿದ್ದಾರೆ ಈ ಸಾರಿಯೂ ಅದೇ ಉತ್ತರ ಹೇಳುತ್ತದೆ ಸರ್ಕಾರ ಅಂದರೆ ಪ್ರಕಾಶ್‌ರವರು ಆ ರೀತಿ ಹೇಳಿದರೆ, ನೀವು ರೈತರ ಮಕ್ಕಳಾಗಿ ಈ ರೀತಿಯ ತಪ್ಪು ಮಾಹಿತಿಯನ್ನು ಸದನಕ್ಕೆ ಕೊಟ್ಟರೆ ನಮಗೂ ಸಿಟ್ಟು ಬಂದುಬಿಡುತ್ತದೆ ಒಂದೊಂದು ಸಾರಿ.

ಶ್ರೀ ಬಿ. ಪ್ರಕಾಶ್ (ಹುಕ್ಕೇರಿ) : ಬಾಂಬೆಗೆ ಹೋಗುತ್ತೇವೆ ಒಪ್ಪಂದ ಮಾಡಿಕೊಳ್ಳುತ್ತೇವೆಂದರೆ ಇದುವರೆಗೆ ಆ ನಿರ್ಣಯ ಆಗಿಲ್ಲ ಆ ನಿರ್ಣಯವನ್ನು ತಾವು ಮಾಡಬೇಕು. ಪ್ರತಿ ಸಲ ಪ್ರಶ್ನೆ ಕೇಳುವುದು ಸರ್ಕಾರ ಉತ್ತರ ಕೊಡುವುದು ಆ ತರಹ ಆಗಬಾರದು. ಯಾವುದಾದರೂ ಒಂದು ನಿಲುವು ಹೇಳಬೇಕು. ಯಾವಾಗ ಮಹಾರಾಷ್ಟ್ರಕ್ಕೆ ಹೋಗುತ್ತಾರೆ ಮಹಾರಾಷ್ಟ್ರದ ಮಂತ್ರಿಗಳ ಜೊತೆಯಲ್ಲಿ ಯಾವಾಗ ಮೀಟಿಂಗ್ ಮಾಡುತ್ತಾರೆ, ಪರಿಹಾರವನ್ನು ಯಾವಾಗ ಮಾಡುತ್ತಾರೆಂದು ಕೂಡಲೇ ಹೇಳಬೇಕು. ಶಾಶ್ವತ ಪರಿಹಾರ ಆಗಬೇಕು.

ಉಪಾಧ್ಯಕ್ಷರು : ಚರ್ಚೆ ಬೇಡ ಇದನ್ನು ಇನ್ನೊಮ್ಮೆ ತೆಗೆದುಕೊಳ್ಳೋಣ ಇದರಲ್ಲಿ ಕ್ಲಾರಿಫಿಕೇಷನ್ ಬೇಡ. ಒಂದೊಂದು ನಿಮಿಷ ಒಬ್ಬರು ತೆಗೆದುಕೊಳ್ಳಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಉಪಾಧ್ಯಕ್ಷರೇ, ಇದರಲ್ಲಿ ಬಹಳ ಮುಖ್ಯವಾದ ಸಮಸ್ಯೆಗಳಿವೆ. ಮುಖ್ಯವಾದ ಸಮಸ್ಯೆಗಳು ಇರುವುದರಿಂದ ಅವರು ಸ್ಪಷ್ಟವಾದ ನಿಲುವನ್ನು ಅವರು ಹೇಳಬೇಕಾಗುತ್ತದೆ. ಶಾಶ್ವತ ಪರಿಹಾರ ಯಾವಾಗ ಕೊಡುತ್ತಾರೆಂದು ಅವರು ಹೇಳಬೇಕು.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ನಮಗೆ ಅವರಿಗೆ ಅಗ್ರಿಮೆಂಟ್ ಆಗಬೇಕು. ಅಗ್ರಿಮೆಂಟನ್ನು ನಾವು ಡ್ರಾಫ್ಟ್‌ಮಾಡಿ ಅವರಿಗೆ ಕಳುಹಿಸಿ ಕೊಟ್ಟಿದ್ದೆವು. ಆ ಡ್ರಾಫ್ಟನ್ನು ಮತ್ತೆ ಮಾಡಿಫಿಕೇಷನ್ ಮಾಡಿ ಮಹಾರಾಷ್ಟ್ರ ಗೌರ್ನಮೆಂಟ್‌ನವರು ನಮಗೆ ಕೊಟ್ಟರು. ಅದನ್ನು ಮಂತ್ರಿ ಮಂಡಲದ ಸಭೆಯಲ್ಲಿಟ್ಟು ಡ್ರಾಫ್ಟ್‌ನ್ನು ರೆಡಿ ಮಾಡಿ ಅವರಿಗೆ ಕಳುಹಿಸಿ ಕೊಟ್ಟಿದ್ದೇವೆ. ಈಗಾಗಲೇ ಎರಡು ಸಾರಿ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಲಿಕ್ಕೆ ಟೈಮ್ ನಿಗದಿಯಾಗಿದ್ದು ಅದು ಮುಂದಕ್ಕೆ ಹೋಗಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರ ದೂದಗಂಗಾ ಯೋಜನೆಯ ಅಗ್ರಿಮೆಂಟ್ ಏನಿದೆ, ಆ ಅಗ್ರಿಮೆಂಟ್‌ಗೆ ಸಹಿ ಹಾಕಿದರೆ ವ್ಯವಹಾರ, ಮುಗಿಯತ್ತದೆ. ಈ ಸದನ ಮುಗಿದ ಕೂಡಲೇ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆ ಹಾಗೂ ನಮ್ಮ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಒಂದು ಸಮಯವನ್ನು ನಿಗದಿ ಮಾಡಿ ಅಗ್ರಿಮೆಂಟ್ ಕೂಡಲೇ ಆಗುವಂತೆ ವ್ಯವಸ್ಥೆ ಮಾಡಲಾಗುವುದು.

(೫) ಹೇಮಾವತಿ ಜಲಾಶಯದ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆಯಾದ ಪ್ರದೇಶದವರಿಗೆ ಪರಿಹಾರ.

ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಭಾರಿ ನೀರಾವರಿ ಮಂತ್ರಿಗಳ ಗಮನಕ್ಕೆ ಕೆಲವು ವಿಚಾರಗಳನ್ನು ತಂದು ಪ್ರಸ್ತಾಪ ಮಾಡಬೇಕೆಂದು ನಾನು ನಿಂತಿದ್ದೇನೆ. ನಾವು ಹೇಮಾವತಿ ಜಲಾಶಯದ ಮೇಲ್ಗಡೆ ಬರತಕ್ಕವರು. ಮುಳುಗಡೆ ಪ್ರದೇಶದಲ್ಲಿ ಬರತಕ್ಕವರು. ನಾವು ಭೂಮಿ ಮನೆ ಮಠ ಎಲ್ಲವನ್ನೂ ಕಳೆದುಕೊಂಡಿದ್ದೇವೆ.

ಶ್ರೀ ಕೆ. ಎನ್. ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ಮಾನ್ಯ ಶಿವಪ್ಪನವರು ಹೇಳತಕ್ಕ ವಿಚಾರ ಕಂದಾಯ ಮಂತ್ರಿಗಳಿಗೆ ಬರುತ್ತದೆ. ನಮ್ಮದು ದುಡ್ಡು ಕೊಡುವುದು ಅಷ್ಟೆ.

ಶ್ರೀ ಬಿ. ಬಿ. ಶಿವಪ್ಪ : ರಿಹ್ಯಾಬಿಲಿಟೇಷನ್ ಮತ್ತು ನಿಮ್ಮ ದರ ಇದೆಯಲ್ಲಾ ದುಡ್ಡಿನ ಬಗ್ಗೆ ಸ್ವಲ್ಪ ಮಾತನಾಡುತ್ತೇನೆ. ಮುಳುಗಡೆ ಪ್ರದೇಶದವರು ಸಹಸ್ರಾರು ವರ್ಷಗಳಿಂದ ಬದುಕುತ್ತಿದ್ದ ಜನ ನಾವು. ಉಪಕಾರಕ್ಕೋಸ್ಕರ ನಾವು ನಮ್ಮ ಸರ್ವಸ್ವವನ್ನು ಕಳೆದುಕೊಂಡು ಹೊರಗೆ ಬಂದಿದ್ದೇವೆ. ಆದರೆ ನಮಗೆ ಕೊಡಬೇಕಾದ ಪರಿಹಾರವನ್ನು ಸರಿಯಾದ ರೀತಿಯಲ್ಲಿ ಕೊಡಲಿಲ್ಲ. ಅದು ಕಂದಾಯ